**ಸಿಸಿ ನಂಃ 1934/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 29-01-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಜಿ ಎನ್ ಜೆ ರವರಿಂದಃ**

7. ಆರೋಪಿಯು ನಿಮ್ಮಿಂದ ಪಡೆದ ಸಾಲವನ್ನು ಯಾವ ರೀತಿಯಾಗಿ ಮರಳಿಸಿದ್ದಾರೆ ಎಂಬುದನ್ನು ಅವರ ವಕೀಲರ ಉತ್ತರ ನೋಟಿಸಿನಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿ ಪರ ನೀಡಿರುವ ಉತ್ತರ ನೋಟಿಸಿಗೆ ನೀವು ಯಾವುದೇ ಪ್ರತ್ಯುತ್ತರ ಕೊಟ್ಟಿಲ್ಲ ಎಂದರೆ ಸರಿ. ನೀವು ಈ ಪ್ರಕರಣದಲ್ಲಿ ನಂತರದಲ್ಲಿ ಹಾಜರುಪಡಿಸಿರುವ ನಿಪಿ-6 ರಿಂದ 10 ರ ದಾಖಲೆಗಳು ನಿಮಗೆ ಆರೋಪಿ ಹಣ ಮರಳಿಸಿರುವುದನ್ನು ಪುಷ್ಟೀಕರಿಸುತ್ತದೆ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಕೊಡಬೇಕಾದ ಎಲ್ಲಾ ಹಣವನ್ನು ಬಡ್ಡಿ ಸಮೇತ ವಾಪಾಸು ಕೊಟ್ಟಿದ್ದರೂ ಸಹ ಭದ್ರತೆಗಾಗಿ ಅವರಿಂದ ಪಡೆದುಕೊಂಡ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ದಿವ್ಯಾ ಮತ್ತು ಜಯಶ್ರೀ ಎಂಬವರು ಒಬ್ಬರೇ ಆಗಿದ್ದು, ಮದುವೆಯ ಮೊದಲು ಆರೋಪಿಯ ಹೆಸರು ಜಯಶ್ರೀ ಇದ್ದು ಮದುವೆಯ ನಂತರ ಅವರ ಹೆಸರು ದಿವ್ಯಾ ಆಗಿರುತ್ತದೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**